## ನೀವೇ ಹೇಳಿದ್ರಲ್ಲ ಟೀಚರ್...

ತುಂಟ ಗೋಪಿಯನ್ನು ಒಂದು ವರ್ಷ ಮುಂಚೆಯೇ ಶಾಲೆಗೆ ಸೇರಿಸಿದ್ದರು. ಅಂದು ಶಿಕ್ಷಕಿ ಎಲ್ಲಾ ಮಕ್ಕಳಿಗೂ ಸ್ಲೇಟ್‌ನಲ್ಲಿ ಎಬಿಸಿಡಿ ಬರೆಯಲು ಹೇಳಿದ್ದರು. ಗೋಪಿ ಪುಸ್ತಕ ನೋಡಿಕೊಂಡು ಬರೆಯಲು ಆರಂಭಿಸಿದ. ಅವನ ಹತ್ತಿರ ಬಂದ ಶಿಕ್ಷಕಿ, 'ಯಾಕೊ ಗೋಪಿ, ನೋಡಿಕೊಂಡು ಬರೀತಾ ಇದ್ದೀಯ? ನೋಡದೇ ಬರೀಬೇಕು. ತಿಳಿತಾ?' ಅಂತ ಹೇಳಿ ಮತ್ತೆ ತಮ್ಮ ಜಾಗದಲ್ಲಿ ಹೋಗಿ ಕುಳಿತರು. ಗೋಪಿ ಕಣ್ಣು ಮುಚ್ಚಿಕೊಂಡು ಎಬಿಸಿಡಿ ಅಂತ ಜೋರಾಗಿ ಹೇಳುತ್ತ ಬರೆಯುತ್ತಿದ್ದ. ಶಿಕ್ಷಕಿ ಮತ್ತೆ ಅವನ ಹತ್ತರ ಹೋಗಿ, 'ಯಾಕೊ ಗೋಪಿ, ಕಣ್ಣು ಮುಚ್ಚಿಕೊಂಡು ಬರೀತಾ ಇದ್ದೀಯ?' ಅಂತ ಕೇಳಿದರು. 'ನೀವೇ ಹೇಳಿದ್ರಲ್ಲ ಟೀಚರ್, ನೋಡದೇ ಬರಿ ಅಂತ' ಎಂದ ಗೋಪಿ.

**ಎನ್. ಕೃಷ್ಣಮೂರ್ತಿ ರಾವ್**





## ಎರಡೂ ಅಲ್ಲ

ಆ ಕಂಪನಿಯ ಬಾಸ್ ಜೋಕ್ ಒಂದನ್ನು ಹೇಳಿದಾಗ ಸಹೋದ್ಯೋಗಿಗಳೆಲ್ಲ ಜೋರಾಗಿ ನಗುತ್ತಿದ್ದರು. ಬಾಸ್ ಎಂಥ ಕೊಳಕು ಜೋಕ್ ಹೇಳಿದರೂ ನಗುತ್ತಿದ್ದ ಪರಮೇಶಿ ಈ ಬಾರಿ ನಗಲಿಲ್ಲ. ಎಲ್ಲದಕ್ಕೂ ನಗುತ್ತಿದ್ದ ಪರಮೇಶಿ ತನ್ನ ಜೋಕು ಕೇಳಿ ಸುಮ್ಮನಿರುವುದನ್ನು ಗಮನಿಸಿದ ಬಾಸ್, 'ಏನಯ್ಯ, ನಾನು ಹೇಳಿದ ಜೋಕ್ ಅರ್ಥವಾಗಲಿಲ್ಲವೊ ಅಥವಾ ನಗು ತರಲಿಲ್ಲವೊ?' ಎಂದು ಕೇಳಿದಾಗ ಪರಮೇಶಿ ಹೇಳಿದ, 'ಎರಡೂ ಅಲ್ಲ ಸರ್, ನನಗೆ ಬೇರೆ ಕಂಪನಿಯಲ್ಲಿ ಕೆಲಸ ಸಿಕ್ಕಿದೆ'.

**ಶಂಕರೇಗೌಡ ತುಂಬಕೆರೆ**